"ನೀವು ಖಂಡಿತವಾಗಿಯೂ ನಿಮ್ಮ ರಾಯಭಾರಿಗೆ ಸೂಚನೆಯನ್ನು ರವಾನಿಸಬಹುದು ಸರ್. ನಮ್ಮ ಮೇಲೆ ವಿದೇಶಾಂಗ ವ್ಯವಹಾರಗಳ ಇಲಾಖೆಗೆ ಯಾವುದೇ ತರಹದ ಅಧಿಕಾರವಿಲ್ಲವೆಂದು ನಮ್ಮ ಮಂತ್ರಿಗಳು ನಿಮ್ಮ ರಾಯಭಾರಿಗೆ ತಿಳಿಸುತ್ತಾರೆ."

"ಹಾಗಾದರೆ, ನಮ್ಮ ಬೇಡಿಕೆ ಜಾರಿಯಾಗುವವರೆಗೆ ನಿಮ್ಮ ದೇಶದ ಜೊತೆಗೆ ಯಾವುದೇ ವಾಣಿಜ್ಯ ವ್ಯವಹಾರಗಳು ನಡೆಯಕೂಡದೆಂದು ನಾನು ನಮ್ಮ ವಾಣಿಜ್ಯ ಇಲಾಖೆಗೆ ತಿಳಿಸಬೇಕಾಗುತ್ತದೆ."

"ಅದು ನಿಮ್ಮ ಮರ್ಜಿ ಸರ್"

"ನಾನು ಮನಸ್ಸು ಮಾಡಿದರೆ, ನಮ್ಮ ದೇಶದಲ್ಲಿ ನಿಮ್ಮ ಕಂಪನಿಗಳು, ವ್ಯಕ್ತಿಗಳು ನಡೆಸುತ್ತಿರುವ ವಾಣಿಜ್ಯ ವ್ಯವಹಾರಗಳನ್ನು ಯಾವುದೇ ಪರಿಹಾರ ನೀಡದೆ ಅರ್ಧಕ್ಕೇ ಮೊಟಕುಗೊಳಿಸಬಲ್ಲೆ!"

"ಇದು ಕೊಂಚ ಅತಿಯಾಯ್ತು ಅಂತ ನಿಮಗನ್ನಿಸಲ್ಲವೇ, ಸರ್?"

"ಅದರಿಂದ ನನಗೇನಾಗಬೇಕಾಗಿದೆ ಮಿಸ್ಟರ್ ಚೇರ್ಮನ್? ನಮ್ಮ ನಾಗರಿಕರು ನಮ್ಮ ದೇಶದ ತೆರಿಗೆಗಳನ್ನು ತಪ್ಪಿಸಿ ನಿಮ್ಮ ಬ್ಯಾಂಕುಗಳಲ್ಲಿ ಕದ್ದು ಇಟ್ಟಿರುವ ಕಾಳಧನವನ್ನು ಹೊರಗೆಳೆಯಲು ನಾನು ಯಾವ ಮಟ್ಟಕ್ಕೂ ಇಳಿಯಲು ಸಿದ್ಧನಿದ್ದೇನೆ."

"ನಿಮ್ಮ ಮರ್ಜಿಯಂತೆಯೇ ಆಗಲಿ ಸರ್. ನಾವು ಇಲ್ಲೀವರೆಗೂ ಪಾಲಿಸಿಕೊಂಡು ಬಂದಿರುವ ಗ್ರಾಹಕ ಗೋಪ್ಯತೆಯ ನೀತಿಯನ್ನು ಯಾವುದೇ ಕಾರಣಕ್ಕೂ ಮುರಿಯಲು ಸಾಧ್ಯವಿಲ್ಲ." ಚೇರ್ಮನ್ ಖಡಾಖಂಡಿತವಾಗಿ ಹೇಳಿದರು.

"ನಾನು ಇವತ್ತಿನಿಂದಲೇ ಲಾಗೋಸಿನಲ್ಲಿರುವ ನಿಮ್ಮ ರಾಯಭಾರ ಕಚೇರಿಯನ್ನು ಮುಚ್ಚಿಸುತ್ತೇನೆ. ನಿಮ್ಮ ರಾಯಭಾರಿಗಳಿಗೆ ಕೊಟ್ಟಿರುವ ಮಾನ್ಯತೆಯನ್ನು ರದ್ದು ಪಡಿಸುತ್ತೇನೆ."

ಮೊಟ್ಟ ಮೊದಲ ಬಾರಿ ಚೇರ್ಮನ್ ಸಾಹೇಬರ ಹುಬ್ಬೇರಿತು.

"ಇಷ್ಟೇ ಅಲ್ಲ. ನಾನು ವಾಪಸ್ಸಾಗುವಾಗ ಲಂಡನಿನಲ್ಲಿ ಒಂದು ವಿಶೇಷ ಪತ್ರಿಕಾಗೋಷ್ಠಿಯನ್ನು ಕರೆಸಿ ನಿಮ್ಮ ಬ್ಯಾಂಕಿನ ಬಗ್ಗೆ ನಮ್ಮ ರಾಷ್ಟ್ರಾಧ್ಯಕ್ಷರ ಅಸಮಾಧಾನವನ್ನು ಬಹಿರಂಗ ಪಡಿಸುತ್ತೇನೆ. ಇದರಿಂದ ನಿಮಗೆ ಲಭಿಸುವ ಕೆಟ್ಟ ಪ್ರಚಾರ ಹೊಸ ಗಿರಾಕಿಗಳನ್ನು ದೂರವಿಡಿಸುವುದಷ್ಟೇ ಅಲ್ಲದೆ, ಹಳೇ ಗಿರಾಕಿಗಳೂ ಮರು ಚಿಂತಿಸುವಂತೆ ಮಾಡುವುದರಲ್ಲಿ ಯಾವುದೇ ಸಂಶಯವಿಲ್ಲ..."

ಆದರೂ, ಚೇರ್ಮನರ ನಿಲುವಿನಲ್ಲಿ ಏನೂ ಬದಲಾವಣೆಗಳಾಗಲಿಲ್ಲ.

"ನನಗೆ ಈಗ ಬೇರೆ ಯಾವುದೇ ದಾರಿಗಳು ಉಳಿದಿಲ್ಲ." ಇಗ್ನೇಶಿಯಸ್ ಅಗರ್ಬಿ ಎದ್ದು ನಿಂತ.

ಕೊನೆಗೂ ಇಗ್ನೇಶಿಯಸ್ ಅಗರ್ಬಿ ಹೊರಡುತ್ತಿದ್ದಾನೆ ಎಂದು ಖುಷಿಯಿಂದೆಂಬಂತೆ ಚೇರ್ಮನರು ಕೈ ಮುಂದಕ್ಕೆ ಚಾಚಿದರು. ಅಗರ್ಬಿ ತನ್ನ ಬಲಗೈಯನ್ನು ಕೋಟಿನ ಜೇಬಿಗಿಳಿಸಿ ಒಳಗಿನಿಂದ ಒಂದು ಪುಟ್ಟ ರಿವಾಲ್ವರನ್ನು ಹೊರತೆಗೆದ. ಅದನ್ನು ನೋಡುತ್ತಲೇ ಚೇರ್ಮನ್ ಮತ್ತು ಅವರ ಸಹಾಯಕ ನಿಂತಲ್ಲಿಯೇ ಮರಗಟ್ಟಿ ಹೋದರು. ಅಗರ್ಬಿ ತುಸು ಮುಂದೆ ಬಂದು ರಿವಾಲ್ವರನ್ನು ಚೇರ್ಮನರ ಬಲಗಿವಿಯಿಂದ ಸ್ವಲ್ಪ ಮೇಲಕ್ಕೆ ಚುಚ್ಚಿ ಹಿಡಿದು ನಿಂತ.

"ನಮ್ಮ ದೇಶದ ಗ್ರಾಹಕರ ಹೆಸರುಗಳನ್ನು ಪಡೆಯಲು ನಾನು ಯಾವ ಮಟ್ಟಕ್ಕೂ ಇಳಿಯಲು ಸಿದ್ಧ ಮಿಸ್ಟರ್ ಚೇರ್ಮನ್." ಅಗರ್ಬಿ ಹೇಳಿದ. "ಈಗಲೂ ನೀವು ಸಹಕರಿಸಲು ಸಿದ್ಧವಿಲ್ಲದಿದ್ದರೆ ನಿಮ್ಮ ಮಿದುಳನ್ನು ಈ ಸುಂದರವಾದ ಕೋಣೆಯಲ್ಲಿ ಚೆಲ್ಲಾಡಲು ನಾನು ಹೇಸುವುದಿಲ್ಲ..."

ಚೇರ್ಮನರ ಹಣೆಯ ಮೇಲೆ ಬೆವರಿನ ಹನಿಗಳು ಸಾಲುಗಟ್ಟತೊಡಗಿದವು.

"ನಿಮ್ಮ ನೈಜೀರಿಯನ್ ಗ್ರಾಹಕರ ಹೆಸರುಗಳನ್ನು ಬೇಗ ತರಿಸಿ..." ಅಗರ್ಬಿ ಧಮಕಿ ಹಾಕಿ, ಚೇರ್ಮನರ ಕಾರ್ಯದರ್ಶಿಯ ಕಡೆಗೆ ತಿರುಗಿ, "ನಾನು ಹೇಳಿದ್ದು ಕೇಳಿಸಿತೇನು?" ಎಂದ ತೀಕ್ಷ್ಣವಾಗಿ.

ಕಾರ್ಯದರ್ಶಿ ಆತಂಕಗೊಂಡು ಅಸಹಾಯಕತೆಯಿಂದ ಚೇರ್ಮನರ ಕಡೆಗೆ ನೋಡಿದ.